ಆ) ಕುಷ್ಟಗಿ ತಾಲ್ಲೂಕಿನ ಕಿಡದೂರು ಗ್ರಾಮದ ಶ್ರೀ ಸಾದ್ವಿ ಶಿರೋಮಣಿ ತುರುಡಗಿ ತಿಮ್ಮಮ್ಮನವರ ಬೃಂದಾವನ ಬಳಿ ಶ್ರೀ ವೆಂಕಟೇಶ್ವರ ದೇವಸ್ಥಾನವನ್ನು ಪ್ರವಾಸೋದ್ಯಮ ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗಿದೆ.

ಇ) ಸೇರಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಪ್ರವಾಸಿ ತಾಣಗಳ ಅಭಿವೃದ್ಧಿ

97 (512) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನಲ್ಲಿ ಪ್ರವಾಸಿ ತಾಣಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರುವ ಸ್ಥಳಗಳು ಯಾವುವು;

ಇ) ಈ ಪ್ರವಾಸಿ ಸ್ಥಳಗಳ ಅಭಿವೃದ್ಧಿಗಾಗಿ, ಹಾಲಿ ಅನುಷ್ಠಾನ ಗೊಂಡಿರುವ ಕಾರ್ಯಕ್ರಮಗಳು ಮತ್ತು ಹಮ್ಮಿಕೊಂಡಿರುವ ಕಾರ್ಯ ಕ್ರಮಗಳು ಯಾವುವು; ಹಾಗೂ ಅದಕ್ಕಾಗಿ ಬಿಡುಗಡೆಗೊಂಡಿರುವ ಹಣವೆಷ್ಟು; (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಮುಳಬಾಗಿಲು ತಾಲ್ಲೂಕಿನಲ್ಲಿ ಈ ಕೆಳಗಿನ ಪ್ರವಾಸಿ ತಾಣಗಳನ್ನು ಗುರುತಿಸಲಾಗಿದೆ.

1. ಮುಳುಬಾಗಿಲು.
2. ಕುರುಡುಮಲೆ
3. ಆವಣಿ
4. ವಿರೂಪಾಕ್ಷಿ
5. ಗುಟ್ಟಳ್ಳಿ ತಿರುಪತಿ
6. ಲಕ್ಷ್ಮೀ ವರಹಾಸ್ವಾಮಿ

ಇ) 1) ಮುಳಬಾಗಿಲು :

ಆಂಜನೇಯ ದೇವಾಲಯದ ಬಳಿ ಕುಡಿಯುವ ನೀರು ಮತ್ತು ಶೌಚಾಲಯವನ್ನು ರೂ. 12.50 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಡಾರ್ಮಿಟರಿ ನಿರ್ಮಾಣಕ್ಕೆ ರೂ.50.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಕೋಲಾರರವರಿಗೆ ಬಿಡುಗಡೆ ಮಾಡಲಾಗಿದೆ.

2) ಕುರುಡುಮಲೆ

ಕುರುಡುಮಲೆ ವಿನಾಯಕ ದೇವಸ್ಥಾನದ ಬಳಿ ಡಾರ್ಮಿಟರಿ ವಸತಿ ಹಾಗೂ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ರೂ.50.00 ಲಕ್ಷಗಳನ್ನು ಕಾರ್ನಿಕ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

3) ಆವಣಿ

ಆವಣಿಯಲ್ಲಿ ಕುಡಿಯುವ ನೀರು ಮತ್ತು ಶೌಚಾಲಯವನ್ನು ರೂ.12,50 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ.

4) ವಿರೂಪಾಕ್ಷಿ ಗ್ರಾಮದ ವಿರೂಪಾಕ್ಷ ದೇವಳದ ಬಳಿ ರೂ.50.00 ಲಕ್ಷಗಳ ಅಂದಾಜಿನಲ್ಲಿ ಡಾರ್ಮಿಟರಿ ನಿರ್ಮಿಸಲಾಗುವುದು.

5) ಗುಟ್ಟಳ್ಳಿ ತಿರುಪತಿ ಬಳಿ ಕುಡಿಯುವ ನೀರು ಮತ್ತು ಶೌಚಾಲಯವನ್ನು ರೂ.12.50 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ವಿವಿಧ ವಸತಿ ಯೋಜನೆಗಳನ್ನು ವಿತರಿಸಲಾದ ಮನೆಗಳು

98 (513) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಆಶ್ರಯ, ಅಂಬೇಡ್ಕರ್, ದೇವದಾಸಿ ಮತ್ತಿತರ ವಸತಿ ಯೋಜನೆಯಲ್ಲಿ ಮಂಜೂರಾದ ಮನೆಗಳೆಷ್ಟು; (ವಿಧಾನಸಭಾ ಕ್ಷೇತ್ರವಾರು ಹಾಗೂ ವರ್ಷವಾರು ಮಾಹಿತಿ ನೀಡುವುದು);

ಆ) ಯಾವ ಯಾವ ವಸತಿ ಯೋಜನೆಯಲ್ಲಿ ಎಷ್ಟೆಷ್ಟು ಮನೆಗಳು ಪೂರ್ಣಗೊಂಡಿವೆ;